ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,

ವಿರಾಜಪೇಟೆ

ಎಂ.ವಿ.ಸಿ .ನಂಃ 146/22

ಸಾಕ್ಷಿದಾರರ ಹೆಸರು ಡಿ. ಕುಮಾರ್ ಪಿಡಬ್ಲ್ಯೂ-2

ತಂದೆಯ ಹೆಸರು ದಾಸಪ್ಪ.

ವಯಸ್ಸು 64 ವರ್ಷ

ವೃತ್ತಿ ನಿವೃತ್ತ ಪಿ.ಎಸ್.ಐ

ವಾಸಸ್ಥಳ ಪೊನ್ನಂಪೇಟೆ

ದಿನಾಂಕಃ 22.11.2025 ರಂದು ಸಾಕ್ಷಿಯನ್ನು ಕರೆಯಿಸಿಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಎ.ಟಿ.ಎಂ ವಕೀಲರಿಂದಃ

ನಾನು ಸೆಪ್ಟಂಬರ್ 2019 ರಿಂದ ಸೆಪ್ಟಂಬರ್ 2022 ರವರೆಗೆ ಪೊನ್ನಂಪೇಟೆಯ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೆನು. ಈ ಪ್ರಕರಣದ ಅರ್ಜಿದಾರರು ನೀಡಿದ ಹೇಳಿಕೆಯ ಅಧಾರದ ಮೇಲೆ ನಮ್ಮ ಠಾಣೆಯಲ್ಲಿ ಗುನ್ನೆ 62/2022 ರಂತೆ ಪ್ರಕರಣ ದಾಖಲಾಗಿರುತ್ತದೆ. ನಂತರ ಪ್ರಕರಣವನ್ನು ಎಚ್ ಸಿ 81 ಪ್ರಮೋದ್ ಕುಮಾರ್ ರವರು ತನಿಖೆಯನ್ನು ನಡೆ ಸಿರುತ್ತಾರೆ. ತನಿಖೆಯನ್ನು ಪೂರ್ಣಗೊಳಿಸಿದ ನಂತರ ನನ್ನ ಮುಂದೆ ದೋಷಾರೋಪಣೆ ಪಟ್ಟಿಯನ್ನು ಅವರು ತಂದು ಹಾಜರುಪಡಿಸಿದ್ದು, ಸದರಿ ದೋಷಾರೋಪಣೆ ಪಟ್ಟಿಗೆ ನಾನು ಸಹಿ ಮಾಡಿ, ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ದೋಷಾರೋಪಣೆ ಪಟ್ಟಿಯನ್ನು ರವಿಕುಮಾರ್ ಆರ್ ಎನ್ನುವ ಆರೋಪಿಯ ವಿರುದ್ದ ಸಲ್ಲಿಸಲಾಗಿರುತ್ತದೆ. ದೋಷಾರೋಪಣೆ ಪಟ್ಟಿಯೊಂದಿಗೆ ಆರೋಪಿಯ ಚಾಲನಾ ಪರವಾನಗಿಯ ಪ್ರತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿರುತ್ತದೆ. ಚಾಲನಾ

ಪರವಾನಗಿಯಲ್ಲಿ ಪರವಾನಗಿದಾರನ ಹೆಸರು ರವಿಕುಮಾರ್ ಎಸ್ ಪಿ ಬಿನ್ ಪಳನಿಸ್ವಾಮಿ ಗೌಂಡರ್ ಎಂದು ನಮೂದಿಸಲಾಗಿತ್ತು. ಸದರಿ ಚಾಲನಾ ಪರವಾನಗಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿ.ಪಿ 18 ಎಂದು ಗುರುತಿಸಲಾಗಿದೆ. ದೋಷಾರೋಪಣೆ ಪಟ್ಟಿಯಲ್ಲಿ ಆರೋಪಿಯ ಹೆಸರು ಮತ್ತು ಆತನ ತಂದೆಯ ಹೆಸರನ್ನು ತಪ್ಪಾಗಿ ರವಿಕುಮಾರ್ ಆರ್ ಬಿನ್ ರಾಮನ್ ಎಂದು ತಪ್ಪಾಗಿ ನಮೂದಿಸಲಾಗಿತ್ತು. ಅಪಘಾತದ ಸಂದರ್ಭದಲ್ಲಿ ರವಿಕುಮಾರ್ ಎಸ್.ಪಿ ಬಿನ್ ಪಳನಿಸ್ವಾಮಿ ಗೌಂಡರ್ ರವರು ಅಪಘಾತಪಡಿಸಿದ ವಾಹನದ ಚಾಲಕರಾಗಿದ್ದರು. ದೋಷಾರೋಪಣೆ ಪಟ್ಟಿಯೊಂದಿಗೆ ವಾಹನದ ಫಿಟ್‌ನೆಸ್ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

3 ನೇ ಎದರುದಾರರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂಃ ವಿರಾಜಪೇಟೆ.